# ನೆನಪಿನ ಬುತ್ತಿ ಬಿಚ್ಚಿದಾಗ...

ಹಳೆಯ ನೆನಪುಗಳು ಯಾವತ್ತೂ ಮಧುರಾತಿಮಧುರ. ಅದರಲ್ಲೂ ಶಾಲೆಯಲ್ಲಿ ಸ್ನೇಹಿತರೊಂದಿಗೆ, ಅಧ್ಯಾಪಕರೊಂದಿಗೆ ಕಳೆದ ಪ್ರತಿಯೊಂದು ಕ್ಷಣವೂ ನೆನಪಿನಂಗಳದಲ್ಲಿ ಕಚಗುಳಿ ಇಡುವಂಥದ್ದು. ಬಾಲ್ಯದ ನೆನಪುಗಳಿಗೆ ಇಂಬುಕೊಡುತ್ತವೆ ಎಂದೋ ತೆಗೆದು ಜತನವಾಗಿ ಇರಿಸಿಕೊಂಡಿದ್ದ ಫೋಟೊಗಳು.

■ ಚಂದ್ರಿಕಾ, ಚಿತ್ರದುರ್ಗ



ಶಾಲೆಯ ದಿನಗಳಲ್ಲಿ ಮಕ್ಕಳೊಂದಿಗೆ ಕುಣಿದು ಕುಪ್ಪಳಿಸಿದ ನೆನಪು, ಅಧ್ಯಾಪಕರೊಂದಿಗೆ ಸಂಕೋಚ, ಭಯ, ಸಲಿಗೆಯಿಂದ ಮಾತನಾಡಿ, ನಕ್ಕು ನಲಿದಾಡಿದ ನೆನಪು, ಮನೆಯಲ್ಲಿ ಒಡಹುಟ್ಟಿದವರೊಂದಿಗೆ ಆಡಿ, ಉಂಡು, ಜಗಳವಾಡಿ ಕಳೆದ ಕ್ಷಣಗಳ ನೆನಪು.. ಹೀಗೆ ಬಾಲ್ಯ, ಶಾಲೆಯ ದಿನಗಳೆಂಬುದು ಒಂದು ಸುಂದರ ಪಯಣದ ಮೆಟ್ಟಿಲುಗಳು. ಇವೇ ಮೆಟ್ಟಿಲುಗಳು ಇಂದಿನ ಬದುಕಿಗೆ ದಾರಿದೀಪ ಜೊತೆಗೆ ಸವಿನೆನಪುಗಳ ಜೋಕಾಲಿಗಳು.

ನನಗೊಂದು ಹವ್ಯಾಸ. ಬಿಡುವಾದಾಗಲೆಲ್ಲ ಹಳೆಯ ಕಡತಗಳನ್ನೆಲ್ಲಾ ತೆಗೆದು ಹರಡಿಕೊಳ್ಳುವುದು. ಹೀಗೆ ಹರಡಿಕೊಂಡಾಗ ಈ ನನ್ನ ಶಾಲೆಯ ಫೋಟೊ ಸಿಕ್ಕಿತು. ಓಹ್... ಹಳೆಯ ನೆನಪುಗಳೆಂದರೆ ಹಕ್ಕಿ ಗರಿಕೆದರಿದ ಹಾಗೆ, ನೆನಪಿನ ಹಕ್ಕಿಗೆ ರೆಕ್ಕೆಪುಕ್ಕಗಳೆಲ್ಲಾ ಬಂದು ಹಾರಾಡ ತೊಡಗುತ್ತದೆ. ಅಬ್ಬಾ ಒಂದೇ ಎರಡೇ ನೆನಪುಗಳು, ಅವೆಲ್ಲ ಸಾಲುಸಾಲು...!

ಎಸ್.ಎಸ್.ಎಲ್.ಸಿ. ಪೂರೈಸಿದಾಗ ಶಾಲೆಯಲ್ಲಿ ಬೀಳ್ಕೊಡುಗೆ ಸಮಾರಂಭದ ದಿನ ತೆಗೆದ ಫೋಟೊ ಇದು. ಸೀರೆ ಉಡಲು ಬರದಿದ್ದರೂ ಫೋಟೋಗಾಗಿ ಸೀರೆ ಉಡಿಸಿಕೊಂಡು ಹೋಗಿದ್ದು, ಸ್ಟುಡಿಯೋದವನು ಲೇಟಾಗಿ ಬಂದು ನಮ್ಮ ಪಾಡಂತೂ ಬೇಡ... ಮುಖದ ಪೌಡರ್ ಎಲ್ಲಾ ಹೊರಟ್ಹೋಯ್ತು ಅಂತ ಗುಸು ಗುಸು ಪಿಸ ಪಿಸ ಮಾತಾಡಿಕೊಂಡು ಪೇಚಾಡಿದ್ದು, ನಂತರ ಒಬ್ಬರನ್ನೊಬ್ಬರು ಅಗಲಿಕೆಯ ದುಃಖದಿಂದ ಅತ್ತೂ ಅತ್ತೂ ಮನೆಗೆ ಬಂದದ್ದು ಎಲ್ಲಾ ಈಗ. ನಿನ್ನೆ ಮೊನ್ನೆ ನಡೆದ ಹಾಗಿದೆ.

ಇನ್ನು ಅಧ್ಯಾಪಕರ ಬಗ್ಗೆ ಹೇಳಬೇಕೆಂದರೆ ಮೊದಲು ಜ್ಞಾಪಕ ಬರೋದೇ 'ಮಾಲತಿ' ಟೀಚರ್. ತುಂಬಾ ಮೃದು, ಸ್ನೇಹಮಯಿ ಅವರ ಸೋಷಿಯಲ್ ಸ್ಟಡೀಸ್ ಪಾಠ ಕೊಬ್ಬರಿ ಬೆಲ್ಲ ತಿಂದ ಹಾಗೆ. ಪ್ರಭಾ ಟೀಚರ್‌ರವರ ಬಯಾಲಜಿ ತುಂಬಾ ಇಷ್ಟವಾದ ಸಬ್ಜೆಕ್ಟ್. ಆಗೆಲ್ಲಾ ಬಯಾಲಜಿಯಲ್ಲಿ ಒಳ್ಳೆ ಮಾರ್ಕ್ಸ್ ಬಂದಿದ್ದರೇ ಎಂ.ಬಿ.ಬಿ.ಎಸ್.ಗೆ ಸೀಟ್ ಸಿಗ್ತಿತ್ತು. ಹಾಗೇ ಬಂದೂ ಇತ್ತು. ಆದರೆ ನಾವು ಬಯಸೋದು ಒಂದು ಆಗೋದೇ ಬೇರೆ, ಡಾಕ್ಟರ್ ಆಗಲೇ ಇಲ್ಲ. ಇರ್ಲಿ ಸೂರಮ್ಮ ಮೇಡಮ್‌ರವರ ಇಂಗ್ಲಿಷ್, ಸರೋಜಾ ಮೇಡಮ್‌ರವರ ಹಿಂದಿ, ಶ್ರೀನಿವಾಸಮೂರ್ತಿ ಮಾಸ್ಟರ್‌ರವರ ಸೈನ್ಸ್, ಶ್ರೀನಿವಾಸ್‌ಮೂರ್ತಿ ಪಾಠ ಮಾಡಲು ಬಣ್ಣ ಬಣ್ಣದ ಸೀಮೆಸುಣ್ಣ (ಚಾಕ್‌ಪೀಸ್) ತರ್ತಾ ಇದ್ದರು. ನಾನು ನನ್ನ ಫ್ರೆಂಡ್ ಸುಮನಾ ಇಬ್ಬರೂ ಆ ಚಾಕ್‌ಪೀಸ್‌ಗಳನ್ನು ಸರ್‌ಗೆ ಗೊತ್ತಾಗದ ಹಾಗೆ ಕದೀತಾ ಇದ್ವಿ. ಆದ್ರೂ ಅದು ಅವರಿಗೆ ಗೊತ್ತಾಗುತ್ತಿತ್ತು. ಇವತ್ತಿಗೂ ಅವೆಲ್ಲಾ ನೆನೆಸಿಕೊಂಡರೆ ಆ ಪಾಠಗಳಿನ್ನೂ ಕಿವಿಯಲ್ಲಿ ಗುಯ್‌ಗುಡುತ್ತಿದೆ. ಅಷ್ಟು ಪ್ರಾಮಾಣಿಕ ಶ್ರದ್ಧೆಯ ಪಾಠಗಳವು.

ಹೆಡ್ ಮಿಸ್ಸಸ್ ಅಂತೂ ಬಹಳ ಒಳ್ಳೆಯವರು. ಆದರೂ ನಾವೆಲ್ಲಾ ತುಂಬಾ ಭಯ ಗೌರವದಿಂದ ದೂರ ದೂರ ಓಡುತ್ತಿದ್ವಿ. ಪಾಪ! ಸಂಸ್ಕೃತ ಪಂಡಿತರನ್ನ ಹಾಗೂ ಕನ್ನಡ ಪಂಡಿತರನ್ನ ಹಾಸ್ಯ ಮಾಡಿಕೊಂಡು ಗೋಳಾಡಿಸುತ್ತಿದ್ವಿ. ಅವರೂ ತುಂಬಾ ತಾಳ್ಮೆಯಿಂದಲೇ ನಗು ನಗ್ತಾ ಪಾಠ ಮಾಡುತ್ತಿದ್ದರು. ಪಾಠ ಪಾತ್ರ ಸೂಪರ್.

ಮಧ್ಯಾಹ್ನ ಊಟದ ಸಮಯದಲ್ಲಂತೂ ಎಲ್ಲಾ ಸ್ನೇಹಿತೆಯರೂ ಬೇಧಭಾವವಿಲ್ಲದೆ ಶ್ರೀಮಂತ ಬಡವ ಎಂಬ ಯಾವ ಬಿಂಕ ಬಿಗುಮಾನಗಳೂ ಇಲ್ಲದೆ ಮನೆಗಳಿಂದ ತಂದ ಊಟವನ್ನು ಹಂಚಿ ತಿನ್ನುತ್ತಿದ್ದದ್ದು– ಹೀಗೇ ಒಂದೇ ಎರಡೇ ನೆನಪುಗಳೆಂದರೆ ಅದೊಂದು ಸವಿಯಾದ ಬುತ್ತಿ. ಈಗಲೂ ಆಗೀಗ ಆ ಬುತ್ತಿ ಬಿಚ್ಚಿ, ಉಣ್ಣುತ್ತಿರುತ್ತೇನೆ. ■